**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 1058/2021** **CW**-1 **PW**-1

**ಸಾಕ್ಷಿಯನ್ನು ದಿಃ 08.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ರಂಗಸ್ವಾಮಿ |
| ತಂದೆಯ ಹೆಸರುಃ | ಕೆಂಪೇಗೌಡ |
| ವಯಸ್ಸುಃ | 65 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಸಾಸಲುಪುರ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಸೊಸೆ. ಚಾಸಾ-4 ನನ್ನ ಮಗ. ಆರೋಪಿತರ ಪರಿಚಯವಿದೆ.

ನನ್ನ ತಂದೆಗೆ 3 ಜನ ಮಕ್ಕಳು. ನಾನು, 1ನೇ ಆರೋಪಿ ಮತ್ತು ನಾಗಪ್ಪ. ನಾವು ಆಸ್ತಿಯನ್ನು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಿದ್ದೇವೆ. ಸುಮಾರು 5 ವರ್ಷದ ಹಿಂದೆ ಮದ್ಯಾಹ್ನ 12.30 ರ ಸಮಯದಲ್ಲಿ ನಾನು ನನ್ನ ಜಮೀನಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿತರು ಅಲ್ಲಿಗೆ ಬಂದು ರಸ್ತೆಯಲ್ಲಿ ಹೋದರೆ ನಿಮ್ಮನ್ನು ಒಂದು ಗತಿ ಕಾಣಿಸುತ್ತೇವೆ ಎಂದರು. 1ನೇ ಆರೋಪಿ ನನ್ನನ್ನು ತಬ್ಬಿಕೊಂಡು 2ನೇ ಆರೋಪಿ ಕುಡುಗೋಲಿನಲ್ಲಿ ನನ್ನ ಭಲಭುಜ ಮತ್ತು ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾರೆ. ನಂತರ ಅಲ್ಲಿಯೇ ಕೆಲಸ ಮಾಡುತ್ತಿದ್ದ ಚಾಸಾ-2 ಮತ್ತು 3 ರವರು ಬಂದು ನಮ್ಮನ್ನು ಸುಧಾರಿಸಿ ಚಾಸಾ-4 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೋಲೀಸರಿಗೆ ಆಸ್ಪತ್ರೆಯಲ್ಲಿ ನಾನು ಹೇಳಿಕೆ ದೂರನ್ನು ನೀಡಿರುತ್ತೇನೆ. ಹೇಳಿಕೆ ದೂರಿಗೆ ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ.

ಸಾಕ್ಷಿಗೆ ಹೇಳಿಕೆ ದೂರನ್ನು ತೋರಿಸಲಾಗಿ, ಅದನ್ನು ಅವರು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದಲ್ಲಿರುವ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರು ನನ್ನನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ದಿಃ 17.04.2021 ರಲ್ಲಿ ಗಲಾಟೆ ಆಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎನ್ ಎಸ್ ರವರಿಂದ ಃ**

ಈ ಘಟನೆಗೂ ಮೊದಲು ನಮಗೂ ಆರೋಪಿತರಿಗೂ ಮಾತುಕತೆ ಇರಲಿಲ್ಲ ಎಂದರೆ ಸರಿ. ಆರೋಪಿತರ ಜಮೀನಿನಲ್ಲಿ ರಸ್ತೆ ಬಿಡುವಂತೆ ಹಲವು ಬಾರಿ ಕೇಳಿರುತ್ತೇನೆ ಎಂದರೆ ಸರಿ. ಆರೋಪಿತರು ಬಿಡುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ. ಆಗ ನಾನು ಅವರ ಜಮೀನಿನಲ್ಲಿಯೇ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ರಸ್ತೆ ಇದೆ ಎನ್ನುತ್ತಾರೆ. ನಮ್ಮ ಮತ್ತು ಅವರ ನಡುವೆ ಯಾವುದೇ ದ್ವೇಷ ಇರಲಿಲ್ಲ. ಮು ಮಾಲು -1 ನಮ್ಮದು ಎಂದರೆ ಸರಿಯಲ್ಲ. ನಾನು ಮು ಮಾ-1 ನ್ನು ಹಿಡಿದುಕೊಂಡು ಹೋಗಿ ರಸ್ತೆ ಬಿಡುವಂತೆ ಗಲಾಟೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ದೂರು ನೀಡಿದ್ದಾರೆ ಎಂದರೆ ಸರಿ. ನಾನೇ 1ನೇ ಆರೊಪಿಯ ಜಮೀನಿನಲ್ಲಿ

ಅತಿಕ್ರಮ ಪ್ರವೇಶ ಮಾಡಿ ಅವರ ಮೇಲೆ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಪೋಲೀಸರು ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ದಿನಾಂಕ ಹೇಳಲಾಗುವುದಿಲ್ಲ. ಆಸ್ಪತ್ರೆಗೆ ಪೋಲೀಸರು 2.00 ಗಂಟೆಗೆ ಬಂದಿರುತ್ತಾರೆ. ಮು ಮಾ–1 ರ ರೀತಿಯ ಕುಡುಗೋಲು ಎಲ್ಲಾ ಕಡೆ ದೊರೆಯುತ್ತವೆ ಎಂದರೆ ಸರಿ. ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**